ಹತ್ತಿರವೇ ಬಾಡಿಗೆಗೆ ಒಂದು ದೊಡ್ಡ ಜಾಗವನ್ನು ತೆಗೆದುಕೊಂಡಿದ್ದರು. ಅಲ್ಲಿ ಈ ಎಲ್ಲ ಮೋಂಬತ್ತಿಗಳನ್ನು ಇಡತೊಡಗಿದರು. ಒಂದು ಪಟ್ಟಿ ಅವರ ಕೈಯಲ್ಲಿ, ಇನ್ನೊಂದು ಭಾವೇಶ್ ಅವರ ಕೈಯಲ್ಲಿ. ಕಳುಹಿಸಿದ ಒಂದೊಂದು ಪೆಟ್ಟಿಗೆಯ ಮೇಲೆ ಪ್ರಾಡಕ್ಟ್ ಹೆಸರು ಮತ್ತು ಸಂಖ್ಯೆಯನ್ನು ಬರೆದಿರುತ್ತಿದ್ದರು. ಹೀಗೆ ಅವರ ಪ್ರದರ್ಶನದ ತಯಾರಿ ಶಿಸ್ತಿನಿಂದ ಆರಂಭವಾಯಿತು. ಈ ಎಲ್ಲ ಬಾಕ್ಸ್‌ಗಳನ್ನು ತೆಗೆದುಕೊಂಡು ಹೋಗುವ ಕೆಲಸದಲ್ಲಿ ತೊಡಗಿ, ಆನಂದ್ ವನ್ ಭುವನ್‌ಗೆ ಬರುವ ಅತಿಥಿಗಳೆಲ್ಲ ಭಾವೇಶ್ ಅವರ ಸ್ನೇಹಿತರಾದರು. ಇದೇ ಸ್ನೇಹ ಮುಂದೆ ತಿಲಕ್ ಸ್ಮಾರಕ ಪ್ರದರ್ಶನದಲ್ಲಿ ಬೇಕಿದ್ದ ಸ್ವಯಂಸೇವಕರ ತಂಡವಾಗಿ ಸಹಾಯವಾಗಲಿತ್ತು. ಸಚಿನ್ ಕೊಟ್ಟ ಪಟ್ಟಿಗಿಂತಲೂ ಹೆಚ್ಚಿನ ಮೋಂಬತ್ತಿಗಳನ್ನು ತಯಾರಿಸಿದರು. ಆ ಒಂದು ಪ್ರದರ್ಶನ ಸಫಲವಾಗಲು ಭಾವೇಶ್ ತಮ್ಮಲ್ಲಿ ಇದ್ದದ್ದೆಲ್ಲವನ್ನೂ ತೊಡಗಿಸಿದ್ದರು. ಅವರು ಮತ್ತು ನೀತಾ ತಮ್ಮ ಬದುಕಿನ ಒಂದೂವರೆ ವರ್ಷಗಳನ್ನು ಈ ಪ್ರದರ್ಶನದ ತಯಾರಿಗೆ ಮುಡಿಪಿಟ್ಟರು. ಭಾವೇಶ್ ಅಂತೂ ಹಗಲು ಇರುಳಿನ ವ್ಯತ್ಯಾಸವಿಲ್ಲದೆ ದುಡಿದರು. ದಿನಕ್ಕೆ 1820 ಗಂಟೆಗಳು ಅವರು ಮೋಂಬತ್ತಿಗಳನ್ನು ಮಾಡುತ್ತಿದ್ದರು. ಆ ಒಂದು ಕೋಣೆಯಲ್ಲಿ ಕೆಲಸ ಮಾಡುತ್ತಾ ಅವರು ಹಗಲು ಇರುಳುಗಳನ್ನು ಮರೆತಿದ್ದರು. ನಿದ್ರೆ ಆಯಾಸವನ್ನೂ ಜಯಿಸಿದಂತೆ ಕಾಣುತ್ತಿತ್ತು. ನೀತಾ ಅವರಿಗೆ ಕಚ್ಚಾ ಸಾಮಗ್ರಿಗಳು ಕಡಿಮೆ ಬೀಳದಂತೆ ಎಚ್ಚರ ವಹಿಸುತ್ತಿದ್ದರು. ಮಾರ್ಕೆಟಿನ ಸ್ಟಾಲ್, ಕುಣಾಲ್‌ನ ವಿದ್ಯಾಭ್ಯಾಸ, ಮಾವನವರ ಆರೋಗ್ಯ ಉಳಿದಂತೆ ಮನೆಯ ಎಷ್ಟೋ ಕೆಲಸಗಳನ್ನು ನೀತಾ ಕೌಶಲ್ಯದಿಂದ ತೂಗಿಸಿಕೊಂಡು ಹೋದರು. ರಾತ್ರಿ ಮೇಣದ ಪೆಟ್ಟಿಗೆಗಳ ಮೇಲೆಯೇ ಹಾಸಿಗೆ ಹಾಸಿ ಮಲಗಿಬಿಡುತ್ತಿದ್ದರು.

ಸಚಿನ್ ಹೇಳಿದ್ದರು, ದೀಪಕ್ ತಿಲಕ್ ಅವರ ಹತ್ತಿರ ತಮ್ಮ ಪ್ರದರ್ಶನಕ್ಕೆ ಸಭಾಂಗಣವನ್ನು ಕೇಳುವಾಗ, ದೀಪಕ್ ಅವರಿಗೆ ಅಷ್ಟು ದೊಡ್ಡ ಹಾಲಿನ ತುಂಬ ಕೇವಲ ಮೋಂಬತ್ತಿಗಳನ್ನು ಪ್ರದರ್ಶಿಸುತ್ತಾರೆಂದು ಅಚ್ಚರಿಯಾಗಿತ್ತು. ಒಂದೋ ಎರಡೋ ಮೋಂಬತ್ತಿಯ ಸ್ಟಾಲ್ ಹಾಕುವುದು ಅರ್ಥವಾಗುತ್ತದೆ. ಒಮ್ಮೆ ಯೋಚಿಸಿ ನೋಡಿ, ಈ ಹಾಲ್ ತುಂಬಾ ದೊಡ್ಡದಿದೆ ಎಂದೂ ಎಚ್ಚರಿಸಿದ್ದರು. ನಿಮಗೆ ಅಷ್ಟು ಬೇಕು ಎಂದರೆ, ಬೇರೆ ಪ್ರದರ್ಶನಗಳ ಸಮಯದಲ್ಲಿ ನಿಮ್ಮ ಈ ಅಂಧ ವ್ಯಕ್ತಿಗೆ ಒಂದೆರಡು ಮೇಜುಗಳನ್ನು ಪುಕ್ಕಟ್ಟೆಯಾಗಿ ಕೊಡುತ್ತೇನೆ ಎಂದೂ ಹೇಳಿದ್ದರು. ಅವರಿಗೆ ಆಗ ತಿಳಿದಿರಲಿಲ್ಲ, ಸಚಿನ್ ಮತ್ತು ಭಾವೇಶ್ ಆಕಾಶವನ್ನು ಮುಟ್ಟುವ ಸಾಹಸದ ಕನಸು ಕಾಣುತ್ತಿರುವರೆಂದು. ಬಹಳ ಕಷ್ಟದಿಂದ ಸಚಿನ್ ಅವರಿಗೆ ಅರ್ಥಮಾಡಿಸಿದ್ದರು. ಸಚಿನ್ ಅದಾಗಲೇ, ಆ ಮೂರು ದಿನದ ಬಾಡಿಗೆ 36,000 ರೂಪಾಯಿಗಳನ್ನು ಜಮೆ ಮಾಡಿದ್ದರು. ಮೊದಲೇ ಆಶ್ವಾಸನೆ ನೀಡಿದಂತೆ ದೀಪಕ್ ಅವರು 19ನೇ ತಾರೀಕಿನ ಬಾಡಿಗೆ ಕೇಳಲಿಲ್ಲ. ಉಚಿತವಾಗಿ ಬಿಟ್ಟುಕೊಡಲಿದ್ದರು.

ಅಲ್ಲಿದ್ದ ಮ್ಯಾನೇಜರ್ ಅವರಂತೂ ಸಚಿನ್ ಅವರನ್ನು ನೋಡಿ ನಗಾಡಿದ್ದರು. ನಿಮ್ಮ ವಿಷಯ ಗೊತ್ತಿಲ್ಲ. ಆದರೆ ಯಾವ ಅಂಧ ವ್ಯಕ್ತಿಗೆ ಈ ಪ್ರದರ್ಶನ ಹಾಕುತ್ತಿರುವಿರೋ, ಆತ ಅಂತೂ ಪೂರಾ ಬರ್ಬಾದ್ ಆಗುತ್ತಾನೆ. ಅದೆಷ್ಟು ವರ್ಷಗಳಿಂದ ಈ ತಿಲಕ್ ಸ್ಮಾರಕದಲ್ಲಿ ನೌಕರಿ ಮಾಡುತ್ತಿದ್ದೇನೆ. ಮೋಂಬತ್ತಿಗಳ ಪ್ರದರ್ಶನವನ್ನು ನನ್ನ ಪೂರಾ ಜೀವನದಲ್ಲಿ ಇಲ್ಲಿಯವರೆಗೂ ಕಂಡಿಲ್ಲ. ನೀವು ಹೇಳುತ್ತಿದ್ದೀರಿ, ಪೂರಾ ಹಾಲಿನಲ್ಲಿ ಮೋಂಬತ್ತಿ ಹಾಕುತ್ತೀರೆಂದು. ಇವನ್ನು ಕೊಳ್ಳುವವರು ಯಾರು? ಎಲ್ಲಿಂದ ಅಷ್ಟು ಸಂಖ್ಯೆಯ ಗ್ರಾಹಕರನ್ನು ತರುತ್ತೀರಿ? ಇಲ್ಲಿಯ ಜನರು ಸಾಕಷ್ಟು ಸಂಪ್ರದಾಯಸ್ಥರು. ಅವರೆದುರು ಈ ಮೋಂಬತ್ತಿ ಮಾರಲು ಹೊರಟಿದ್ದೀರಿ. ಅದು ಸಾಲದು ಎಂದು ಜುಲೈ ತಿಂಗಳು ಮಳೆಗಾಲದ ಸಮಯ. ಆ ಮೂರೂ ದಿನ ಜೋರಾಗಿ ಮಳೆ ಬಂದಿತು ಎಂದರೆ ಮುಗಿಯಿತು. ಪ್ರದರ್ಶನ ಅಸಫಲವೇ. ನಿಮ್ಮ ಕೈಗೆ ಮೂರು ಕಾಸು ಬಾರದು ಎಂದಿದ್ದರು. ಇಷ್ಟೆಲ್ಲ ಮಾತುಗಳನ್ನು ಕೇಳಿಯೂ ಅವರಿಗೆ ಭಾವೇಶ್ ಅವರಲ್ಲಿ ವಿಶ್ವಾಸವಿತ್ತು. ಭಾವೇಶ್ ಅವರಿಗೆ ಭರವಸೆಯಿತ್ತು. ಪುಣೆಯ ಜನಕ್ಕೆ ಕಲೆಯ ಬಗ್ಗೆ ಆಸಕ್ತಿ ಇದೆ ಎಂಬ ಭರವಸೆ ಅದು. ತಮ್ಮ ಕ್ಷಮತೆಯ ಬಗ್ಗೆ ಭರವಸೆ ಅದು. ಈ ಎಲ್ಲ ನಕಾರಾತ್ಮಕ ಉಪದೇಶಗಳನ್ನು ಅವರು ಕಿವಿಗೆ ಹಾಕಿಕೊಳ್ಳಲು ಹೋಗದೆ, ತಮ್ಮ ಲಕ್ಷ್ಯದತ್ತ ತಲುಪಲು ತಯಾರಿ ನಡೆಸಿದರು.

* * *

ಇಸವಿ 2007 ಬರುತ್ತಿದ್ದಂತೆ, ಭಾವೇಶ್ ಮತ್ತು ಸಚಿನ್ ಇಬ್ಬರೂ ಮತ್ತೊಂದು ಕ್ಷೇತ್ರದಲ್ಲಿಯೂ ಕೆಲಸ ಮಾಡತೊಡಗಿದರು. ಕಾರಣ ಆ ಪ್ರದರ್ಶನದ ವಿಜ್ಞಾಪನೆ ಮತ್ತು ಪ್ರಚಾರ ಮಾಡುವ ಅಗತ್ಯ ಇತ್ತು. ಸಚಿನ್ ಅವರು ಭಾವೇಶ್ ಅವರನ್ನು ಕುರಿತು ಒಂದು ಸಾಕ್ಷ್ಯಚಿತ್ರವನ್ನು ತಯಾರಿಸಲು ಇಚ್ಛಿಸಿದರು. ಇದೇ ಕಾರಣಕ್ಕೆ ಅವರು ಪುಣೆಯ ಪ್ರಸಿದ್ಧ ಆರ್ಕಿಟೆಕ್ಟ್ ಆದ ಪ್ರದೀಪ್ ಗಿರಿ ಅವರ ಪತ್ನಿ ಪೂಜಾ ಗಿರಿಯನ್ನು ಭೇಟಿಯಾದರು.

ಪೂಜಾ ಗಿರಿ ಬಲು ದೊಡ್ಡ ಕಲಾವಿದರು ಮತ್ತು ಅನೇಕ ಡಾಕ್ಯುಮೆಂಟರಿಗಳಿಗೆ ಅವರು ತಮ್ಮ ಧ್ವನಿಯನ್ನು ನೀಡಿದ್ದರು. ಅವರ ಸಹ ಕಲಾವಿದ ಸಂಜಯ್ ಡೋರೆಯೊಂದಿಗೂ ಭೆಟ್ಟಿಯಾದರು. ಅವರು ಪುಣೆಯ ಬಿ.ಎಸ್.ಎನ್.ಎಲ್.ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಚಿತ್ರಕತೆ ಬರೆಯುವ ಲೇಖಕರು ಕೂಡ. ಅವರು ಸಾಕ್ಷ್ಯಚಿತ್ರಗಳನ್ನು ತಯಾರಿಸುವಲ್ಲಿ ಬಹಳಷ್ಟು ದಕ್ಷರಿದ್ದರು. ಅವರೊಡನೆ ಸಚಿನ್, ಭಾವೇಶ್ ಅವರನ್ನು ಕುರಿತ ಡಾಕ್ಯುಮೆಂಟರಿ ತಯಾರಿಸುವ ಪ್ರಸ್ತಾಪವನ್ನು ಇಟ್ಟರು. ಅದೇ ದಿನಗಳಲ್ಲಿ ಮಹಾಬಲೇಶ್ವರದ ರೋಟರಿ ಕ್ಲಬ್ ಈ ಇಬ್ಬರು ಕಲಾವಿದರ ಒಂದು ಕಾರ್ಯಕ್ರಮವನ್ನು ಆಯೋಜಿಸಿತ್ತು. ಅಲ್ಲಿ ಭಾವೇಶ್ ಅವರನ್ನು ಅತಿಥಿಯಾಗಿ ಆಮಂತ್ರಿಸಿದ್ದರು. ಸಚಿನ್ ಅವರು ಈ ಸಮಾರಂಭದಲ್ಲಿ ಭಾವೇಶ್ ಅವರನ್ನು ಆ ಇಬ್ಬರು ಕಲಾವಿದರಿಗೆ ಪರಿಚಯ ಮಾಡಿಕೊಟ್ಟರು. ನಂತರ ಕೆಲವು ಛಾಯಾಗ್ರಾಹಕ ಮಿತ್ರರನ್ನೂ ಜೊತೆ ಮಾಡಿ, ಹತ್ತು ನಿಮಿಷಗಳ ಸಾಕ್ಷ್ಯಚಿತ್ರವನ್ನು ಶೂಟ್ ಮಾಡಿದರು.

ಮೋಂಬತ್ತಿ ತಯಾರಿಸುವ ಕೋಣೆಯಲ್ಲಿ ದೊಡ್ಡ ಕ್ಯಾಮೆರಾ ಇರಿಸಿ ಶೂಟಿಂಗ್ ಮಾಡಲು ಸಾಧ್ಯವಿರಲಿಲ್ಲ. ಹಾಗಾಗಿ ಆ ಚಿಕ್ಕ ಗುಡಿ ಕಾರ್ಖಾನೆಯನ್ನೇ ಒಂದು ಟೆಂಪೋದಲ್ಲಿ ಹಾಕಿಕೊಂಡು ಆನಂದ್ ವನ್‌ನ ವಿಶಾಲವಾದ 2000 ಚದರ ಅಡಿಗಳ ಕಾನ್ಫರೆನ್ಸ್ ಕೋಣೆಗೆ ಸ್ಥಳಾಂತರಿಸಿ ಇಡುವುದು ಎಂದು ನಿರ್ಧಾರವಾಯಿತು. ಅಲ್ಲಿ ಮತ್ತೆ ಕಾರ್ಖಾನೆಯಂತಹ ದೃಶ್ಯವನ್ನು ತಯಾರಿಸಿದರು. ಈಗ ಕ್ಯಾಮೆರಾಗಳನ್ನು ನೆಟ್ಟು ಶೂಟ್ ಮಾಡಲು ಸಾಧ್ಯವಾಯಿತು. ಇಷ್ಟೆಲ್ಲ ಪ್ರಯತ್ನಗಳ ನಂತರ ಸುಂದರವಾದ ಸಾಕ್ಷ್ಯಚಿತ್ರ ಸಿದ್ಧವಾಗಿತ್ತು. ಎಲ್ಲ ಛಾಯಾಚಿತ್ರಗಾರರು, ಚಿತ್ರಕತೆ ಬರೆದವರು ಮತ್ತು ಕಂಠದಾನ ನೀಡಿದ ಕಲಾವಿದರು ಈ ಡಾಕ್ಯುಮೆಂಟರಿಗೆ ಹಣವನ್ನು ತೆಗೆದುಕೊಳ್ಳದೆಯೇ ದುಡಿದಿದ್ದರು. ಇಷ್ಟೆಲ್ಲ ಜನರ ಸ್ನೇಹ ಸಹಕಾರ ತಮಗೆ ಒದಗಿ ಬಂದ ಬಗ್ಗೆ ಭಾವೇಶ್ ಸದಾ ಕೃತಜ್ಞರಿದ್ದರು.

ಅದೇ ದಿನಗಳಲ್ಲಿ ಪುಣೆಯಲ್ಲಿ ವಾಸವಿದ್ದ ಪ್ರಸಿದ್ಧ ವ್ಯಂಗ್ಯ ಚಿತ್ರಕಾರ ಮಂಗೇಶ್ ತೆಂಡೂಲ್ಕರ್ ಅವರು ಮಹಾಬಲೇಶ್ವರದ ಆನಂದ್ ವನ್‌ಗೆ ಬಂದಿದ್ದರು. ಅವರು ಭಾವೇಶ್ ಅವರ ಮನೆ ಮತ್ತು ಕಾರ್ಖಾನೆ ಎಲ್ಲಾ ಆದ ಆ ಕೋಣೆಗೆ ಬಂದಿಳಿದರು. ಅವರ ಪ್ರದರ್ಶನಕ್ಕೆ ತಾವೂ ಪೂರ್ಣ ಬೆಂಬಲ ನೀಡುವುದಾಗಿ ಆಶ್ವಾಸನೆ ಕೊಟ್ಟರು. ದಿನಾಂಕ 27 ಜೂನ್, ಹೆಲೆನ್ ಕೆಲರ್ ಅವರ ಜನ್ಮದಿನ. ಅಂದು ಮಂಗೇಶ್ ಅವರು ಅಂಧತ್ವವನ್ನು ಕುರಿತು ಹಾಗೂ ಭಾವೇಶ್ ಅವರ 'ಸನ್‌ರೈಸ್ ಕ್ಯಾಂಡಲ್ಸ್' ಕುರಿತು ಒಂದು ಒಳ್ಳೆಯ ಲೇಖನವನ್ನು ಬರೆದು ಪ್ರಕಟಿಸಿದರು. ಮರು ತಿಂಗಳು ಪುಣೆಯಲ್ಲಿಯೇ ಯೋಜಿಸಲಾಗಿರುವ ಮೋಂಬತ್ತಿಗಳ ಪ್ರದರ್ಶನದ ಬಗ್ಗೆಯೂ ಅಲ್ಲಿ ಬರೆದಿದ್ದರು. ಈ ಲೇಖನ ಸಮಾಚಾರ ಪತ್ರ 'ಸಾಮ್ನಾ'ದ ಮುಖಪುಟದಲ್ಲಿ ಪ್ರಕಟವಾಗಿತ್ತು. ಇದು ಜನರಿಗೆ ತಿಲಕ ಸ್ಮಾರಕದ ಪ್ರದರ್ಶನ ಮತ್ತು ಭಾವೇಶ್ ಅವರ ಸನ್‌ರೈಸ್ ಕ್ಯಾಂಡಲ್ಸ್ ಬಗ್ಗೆ ತಿಳಿಸುವಲ್ಲಿ ಸಹಾಯಕವಾಯಿತು. ಇಷ್ಟೇ ಅಲ್ಲದೆ ಈ ಲೇಖನದಿಂದಾಗಿ, ಇತರ ಪತ್ರಿಕೆಗಳಿಗೂ ಈ ಪ್ರದರ್ಶನದ ಬಗ್ಗೆ ಕುತೂಹಲ ಮೂಡಿತು. ಎಲೆಕ್ಟ್ರಾನಿಕ್ ಮಾಧ್ಯಮಗಳು, ಮರಾಠಿ ದೂರದರ್ಶನ ವಾಹಿನಿಗಳಿಗೆ ತಲುಪುವ ಮಾತು ಬಂದಾಗ, ಆ ದಿನಗಳಲ್ಲಿ ಪುಣೆಯ 'ಬಾಲಮುದ್ರಾ ಫೋಟೊ ಸ್ಟುಡಿಯೋ'ದ ಶ್ರೀಕೃಷ್ಣ ಪರಂಜಪೆ ಈ ಪ್ರಯತ್ನದಲ್ಲಿ ಭಾಗಿಯಾದರು. ತಮ್ಮ ದೊಡ್ಡ ಫೋಟೊ ಸ್ಟುಡಿಯೊ ಅನ್ನು ಆ ಎಲ್ಲ ಚಾನೆಲ್‌ಗಳಿಗೆ ಒದಗಿಸಿದರು. ಅಲ್ಲಿ ಮತ್ತೊಮ್ಮೆ ಕಾರ್ಖಾನೆಯ ದೃಶ್ಯವನ್ನು ಭಾವೇಶ್ ಜೋಡಿಸಿ ಇಟ್ಟರು. ಆ ಎಲ್ಲ ಚಾನೆಲ್‌ಗಳ ಕ್ಯಾಮೆರಾಗಳ ಎದುರು ಮೋಂಬತ್ತಿಗಳನ್ನು ತಯಾರಿಸಿ ತೋರಿಸಿದರು.

ಶ್ರೀಕೃಷ್ಣ ಅವರ ಪುತ್ರ ಶ್ರೇಯಸ್ ಮರಾಠಿಯಲ್ಲಿ